ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

(7)

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 21/1/21

# ಕಾನೂನು ಮಾನ್ಯತೆಯ ಕಡತಕ್ಕೆ ಹುಕುಂ

ಸಂ.ಕ,ಸಮಾಚಾರ ಬೆಂಗಳೂರು 21/1/21

ಸಭಾಪತಿ ಕೆ.ಪ್ರತಾಪ ಚಂದ್ರ ಶೆಟ್ಟಿ ಅವರ ವಿರುದ್ಧ ಬಿಜೆಪಿ ನೀಡಿರುವ ಅವಿಶ್ವಾಸ ನೋಟೀಸ್‌ನ ಕಾನೂನು ಮಾನ್ಯತೆ ಕುರಿತು ಸಂಸತ್ ಕಾರ್ಯಕಲಾಪಗಳಿಂದ ಮಾಹಿತಿ ಮತ್ತು ಉದಾಹರಣೆ ಸಹಿತಿ ಕಡತ ಮಂಡಿಸುವಂತೆ ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ವಿಧಾನ ಪರಿಷತ್ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಡಿಸೆಂಬರ್ 15 ರಂದು ಮೇಲ್ಮನೆಯಲ್ಲಿ ನಡೆದ ಗಲಾಟೆ ಹಿನ್ನೆಲೆಯಲ್ಲಿ ಸಭಾಪತಿ ವಿರುದ್ಧ ಬಿಜೆಪಿ ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಮೇಲೆ ಯಾವುದೇ ತೀರ್ಮಾನವಾಗಿರಲಿಲ್ಲ. ಬಳಿಕ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ನಂತರ ಜೆಡಿಎಸ್ ಸದಸ್ಯರು ಬಿಜೆಪಿಗೆ ಬೆಂಬಲ ನೀಡಿರುವುದಾಗಿ ಹಾಗು ಕಾಂಗ್ರೆಸ್‌ಗೆ ನೀಡಿರುವ ಬೆಂಬಲ ವಾಪಸ್ ಪಡೆದಿರುವುದಾಗಿ ನೋಟೀಸ್‌ನಲ್ಲಿ ತಿಳಿಸಿದ್ದರು.

## ಮೇಲ್ಮನೆ ಕಾರ್ಯದರ್ಶಿ ಎಡವಟ್ಟು

ವಿಶೇಷವೆಂದರೆ ಜನವರಿ 13ರಂದು ಸಚಿವ ಸಂಪುಟ ಸಭೆಯಲ್ಲಿ ವಿಧಾನ ಮಂಡಲ ಜಂಟಿ ಅಧಿವೇಶನ ಕರೆಯುವ ಬಗ್ಗೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಿತ್ತು. ರಾಜ್ಯಪಾಲರು ಅಧಿಕೃತ ಒಪ್ಪಿಗೆ ನೀಡಿ ಕಲಾಪ ನಡೆಸುವ ಸಂಬಂಧ ಆದೇಶ ಹೊರಡಿಸುವ ಮುನ್ನವೇ ವಿಧಾನ ಪರಿಷತ್ ಕಾರ್ಯದರ್ಶಿಗೆ ಬಿಜೆಪಿ ಸದಸ್ಯರು ಅವಿಶ್ವಾಸ ಮಂಡಿಸುವ ನೋಟೀಸ್ ನೀಡಿದ್ದರು.

ಡಿಸೆಂಬರ್ ತಿಂಗಳಲ್ಲಿ ನೀಡಿದ ನೋಟೀಸ್ ಅಧಿವೇಶನ ಮುಂದೂಡಿಕೆ ಹಾಗೂ ಕಲಾಪವನ್ನು ಸಮಾಪನಗೊಳಿಸಿದ ಕಾರಣಕ್ಕೆನೋಟೀಸ್ ಸಹ ಮಾನ್ಯತೆ ಕಳೆದುಕೊಂಡಿದೆ. ಆದರೆ ರಾಜ್ಯಪಾಲರು ಸದನ ಕಲಾಪ ನಡೆಸುವ ಸಂಬಂಧ ಅಧಿಕೃತ ಆದೇಶ ನೀಡಿ ಹಾಗೂ ಸದಸ್ಯರಿಗೆ ಸಮನ್ಸ್ ನೀಡುವ ಮುನ್ನವೇ ಕಾರ್ಯದರ್ಶಿ ಮಹಾಲಕ್ಷ್ಮೀ ತರಾತುರಿಯಲ್ಲಿ ಅವಿಶ್ವಾಸ ನಿರ್ಣಯದ ನೋಟೀಸ್ ಪಡೆದಿದ್ದಾರೆ. ಈ ಬಗ್ಗೆ ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಅವರು ಸ್ಪಷ್ಟೀಕರಣ ನೀಡುವಂತೆ ಹಾಗೂ ಲೋಕಸಭೆ, ರಾಜ್ಯಸಭೆಯಲ್ಲಿನ ನಡಾವಳಿ, ಉದಾಹರಣೆ ಸಮೇತ ಕಡತ ಮಂಡಿಸುವಂತೆ ಕಾರ್ಯದರ್ಶಿಗೆ ಸೂಚಿಸಿ ಕಡತ ವಾಪಸ್ ನೀಡಿದ್ದರು. ಈ ನಡುವೆ ಸಭಾಪತಿ ಕಡತ ವಾಪಸ್ ನೀಡಿದ್ದರಿಂದ ಸಮಸ್ಯೆ ಉದ್ಭವಿಸಬಹುದೆಂಬ ಭೀತಿಯಿಂದಇದರಿಂದ ಕಾರ್ಯದರ್ಶಿ ಬಿಜೆಪಿ ಸದಸ್ಯರಿಂದ ಮತ್ತೊಮ್ಮೆ ಸಭಾಪತಿ ವಿರುದ್ಧ ಅವಿಶ್ವಾಸ ಸೂಚನೆ ಪತ್ರ ಪಡೆದು ಕಡತ ಮಂಡಿಸಿದ್ದಾರೆ ಎನ್ನಲಾಗಿದೆ. ಕಾರ್ಯದರ್ಶಿ ಅವರ ನಡೆ ಗೊಂದಲಕ್ಕೆ ಆಸ್ಪದ ಮಾಡಿಕೊಟ್ಟಿದೆ. ಹಿಂದಿನ ನೋಟೀಸ್‌ಗೆ ಮಾನ್ಯತೆ ಇದ್ದರೆ ಮತ್ತೊಂದು ನೋಟೀಸ್ ಪಡೆಯುವ ಅಗತ್ಯವಿರಲಿಲ್ಲ. ಹಾಗಿದ್ದೂ ಲೋಕಸಭೆಯ ಕಾರ್ಯದರ್ಶಿಯ ಸ್ಪಷ್ಟೀಕರಣದೊಂದಿಗೆ ಮತ್ತೊಂದು ನೋಟೀಸ್ ಪಡೆಯುವ ಮೂಲಕ ಮೇಲ್ಮನೆ ಕಾರ್ಯದರ್ಶಿ ಎಡವಟ್ಟು ಮಾಡಿಕೊಂಡಿದ್ದಾರೆಂದು ಹೇಳಲಾಗಿದೆ.